


ಮಹಾಭಾರತದೊಳಗಿಂದ ಒಂದಿಷ್ಟು

■ ಹಾಡುಪಾಡು ರಾಮು
ಕಲೆ: ಎಚ್.ಎಸ್. ಮೋನಪ್ಪ

# ಕುರುಡ ಕಟ್ಟಿದ ನೊಗದ ಹಾಗೆ ಕಟ್ಟಿದ್ದೆಲ್ಲಾ ಬಿಚ್ಚಿಕೊಳ್ಳುತ್ತಿವೆ

(ಯುಧಿಷ್ಠಿರನ ರಾಜಸೂಯ ಯಾಗ ಮುಗಿದ ಮೇಲೆ)

**ದುರ್ಯೋಧನ:** ದಿಢೀರ್ ಏಳಿಗೆಯ ಪಾಂಡವರಿಂದ ಐಶ್ವರ್ಯ ಕಿತ್ತುಕೊಳ್ಳದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ.

ಕಿತ್ತುಕೊಳ್ಳಬೇಕು ಅಥವಾ ಯುದ್ಧದಲ್ಲಿ ಸಾಯಬೇಕು
ಅವರು ದಿನೇ ದಿನೇ ಬಲವಾಗುತ್ತಿದ್ದಾರೆ
ನಮ್ಮ ಸಂಪತ್ತು ಇದ್ದಷ್ಟೇ ಇದೆ
ಅವರಿಗೆ ಸಮ ಅಲ್ಲದಿದ್ದರೆ ಯಾಕೆ ಬದುಕಿರಬೇಕು
ಕುರುಡ ಕಟ್ಟಿದ ನೊಗದ ಹಾಗೆ ಕಟ್ಟಿದ್ದೆಲ್ಲ ಬಿಚ್ಚಿಕೊಳ್ಳುತ್ತಿದೆ
ಎಳೆರೆಂಬೆಗಳು ಚಿಗುರುತ್ತಿವೆ ಬಲ ಕೊಳೆಯುತ್ತಿವೆ
ನೆಲೆ ತಪ್ಪಿದ ಹಾಗಾಗಿದೆ ನನಗೆ
ಬಣ್ಣಗೆಟ್ಟ ನನ್ನ ಶರೀರ ಸೊರಗುತ್ತಾ ಇದೆ. ಮಾಂಸಖಂಡ ನವೆಯುತ್ತಾ ಇದೆ

**ಶಕುನಿ:** ಯಾವ ಯುಧಿಷ್ಠಿರನ ಐಶ್ವರ್ಯವನ್ನು ನೋಡಿದ ಮೇಲೆ ನೀನು ಇಷ್ಟೊಂದು ಚಿಂತಾಕ್ರಾಂತವಾಗಿದ್ದಿಯೋ ಅದನ್ನು ನಿಮಿಷದಲ್ಲಿ ಅಪಹರಿಸುತ್ತೇನೆ. ಅವರನ್ನು ಇಲ್ಲಿಗೆ ಕರೆಸು, ನನಗೆ ಯಾವ ಶ್ರಮವೂ ಇಲ್ಲ.

ಸೈನ್ಯ ಇಟ್ಟುಕೊಂಡು ಯುದ್ಧ ಮಾಡಬೇಕಾಗೂ ಇಲ್ಲ. ಆ ಮೂರ್ಖರನ್ನು ಬರೀ ದಾಳಗಳನ್ನೆಸೆದೇ ಸೋಲಿಸುತ್ತೇನೆ.

